ಕರ್ನಾಟಕ ಸರಕಾರ
(ಕಂದಾಯ ಇಲಾಖೆ)
**ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಾರ್ಯಾಲಯ, ಮಂಗಳೂರು**
ದೂರವಾಣಿ:(0824) -2220584,590, 1077 (ಉಚಿತ ಕರೆ), ಫ್ಯಾಕ್ಸ್: (0824) 2220584, ಇ-ಮೇಲ್ : dc.mnglr@gmail.com

**ನಮೂನೆ -1**

**ಭಾಗ- ಎ**

**ಸಾಮಾಜಿಕ ಪರಿಣಾಮ ನಿರ್ಧರಣ ಅಧಿಸೂಚನೆ**

["ಭೂಸ್ವಾಧೀನ, ಪುನರ್ವಸತಿ ಹಾಗೂ ಪುನರ್ನಿರ್ಮಾಣದಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರದ ಹಕ್ಕು (ಕರ್ನಾಟಕ) ನಿಯಮಗಳು 2015 ರ ನಿಯಮ 3(i) ರ ಅನ್ವಯ]

**ಆದೇಶ ಸಂಖ್ಯೆ: ಎಲ್.ಎ.ಕ್ಯೂ.ಎಂ.ಎಸ್.ಸಿ.ಸಿ.ಆರ್ 104/2017/12645/ಬಿ1 ದಿನಾಂಕ : 18/07/2017**

1. ಏಶಿಯನ್ ಡೆವೆಲಪ್ ಮೆಂಟ್ ಬ್ಯಾಂಕ್ (ADB) ನೆರವಿನೊಂದಿಗೆ ಕರ್ನಾಟಕ ಸರಕಾರದ ಕೆಯುಐಡಿಎಫ್ ಸಿ (Karnataka Urban Infrastructure Development and Finance Corporation -KUIDFC) ಸಂಸ್ಥೆಯು KIUWMIP (Karnataka Integrated Urban Water Management and Investment Programme) Tranche-2 "ಜಲಸಿರಿ" ಯಡಿ 24 x 7 ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಮಂಗಳೂರು ನಗರದಲ್ಲಿ ಅನುಷ್ಠಾನಗೊಳಿಸಲಿದೆ.
2. ಈ ಯೋಜನೆಯಡಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 22 ಸಂಖ್ಯೆಯ ಭೂಮಿ ಮೇಲ್ಪಟ್ಟದ/ ನೆಲ ಮಟ್ಟದ ಜಲ ಸಂಗ್ರಹಾಗಾರಗಳನ್ನು ನಿರ್ಮಿಸಲು ಬೇಕಾಗಿರುತ್ತವೆ. ಈ ಪೈಕಿ 16 ಭೂಮಿಗಳು ಸರಕಾರಿ ಸ್ಥಳಗಳಾಗಿವೆ. ಉಳಿದ 6 ಸ್ಥಳಗಳಲ್ಲಿ ಖಾಸಗಿ ಭೂಮಿಗಳನ್ನು ಜಲ ಸಂಗ್ರಹಾಗಾರ ನಿರ್ಮಿಸುವ ಉದ್ದೇಶಕ್ಕೆ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿದೆ. ಅವುಗಳ ಪೈಕಿ ಈ ಕೆಳಗಿನ ಬೋಳೂರು-ಬಿ ಪ್ರದೇಶದ ನೆಲ ಮಟ್ಟದ ಜಲ ಸಂಗ್ರಹಾಗಾರ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿ ಕೂಡಾ ಒಂದಾಗಿದೆ.
3. ಬೋಳೂರು-ಬಿ ಪ್ರದೇಶದಲ್ಲಿ ಸ್ಥಾಪಿಸಲ್ಪಡುವ 20 ಲಕ್ಷ ಲೀಟರ್ ನೀರಿನ ಮೇಲ್ಮಟ್ಟದ ಜಲ ಸಂಗ್ರಹಾಗಾರ (OHT) ನಗರದ 6 ವಲಯದ, 3909 ಮನೆಗಳಿಗೆ ಅಂದರೆ ಸುಮಾರು 19535 ಜನ ಸಂಖ್ಯೆಗೆ (2011 ರ ಜನಗಣತಿ ಪ್ರಕಾರ) 24 x 7 ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲಿದೆ. ಮುಂದಿನ 30 ವರ್ಷಗಳ ಕುಡಿಯುವ ನೀರಿನ ಬೇಡಿಕೆಯ ಅನುಸಾರ ಯೋಜನೆಯನ್ನು ರೂಪಿಸಲಾಗಿದೆ.
4. ಸಾರ್ವಜನಿಕ ಉದ್ದೇಶವನ್ನು ಹೊಂದಿರುವ ಈ ಯೋಜನೆಯ ಅನುಷ್ಠಾನಕ್ಕೆ ಮಂಗಳೂರು ನಗರದ ಬೋಳೂರು-ಬಿ ಪ್ರದೇಶದಲ್ಲಿರುವ ಕೆಳಕಂಡ ಭೂಮಿ ಅಗತ್ಯವಿದೆ. ಅದರ ವಿವರಗಳು ಕೆಳಕಂಡಂತಿವೆ.

| ಜಿಲ್ಲೆ | ತಾಲೂಕು | ಗ್ರಾಮ | ಸ.ನಂ | ವಿಸ್ತೀರ್ಣ | RTC ಪ್ರಕಾರ ಹಕ್ಕುದಾರರ ಹೆಸರು | ಕಟ್ಟಡ ಕೃತಗಳು | ಮರ ಮಟ್ಟುಗಳು |
|---|---|---|---|---|---|---|---|
| ದಕ್ಷಿಣ ಕನ್ನಡ | ಮಂಗಳೂರು | ಬೋಳೂರು – ಬಿ (ಕೋಡಿಕಲ್) | 12/1AP1 | 0.35 | ಮೇ।. ಚಿತ್ರಕಲಾ ಇನ್ ವೆಸ್ಟ ಮೆಂಟ್ ಟ್ರೇಡ್ ಬಿಸ್ಸ್ ನೆಸ್ ಪೈನಾನ್ಸ್ ಲಿಮಿಟೆಡ್ | ಕಾಂಪೌಂಡ್ ಗೋಡೆ | ಕಾಡು ಗಿಡಗಳು |
| ಒಟ್ಟು ವಿಸ್ತೀರ್ಣ | | | | 0.35 | | | |

5. ಕೋಷ್ಟಕದ ಜಮೀನನ್ನು ಭೂಸ್ವಾಧೀನ, ಪುನರ್ವಸತಿ ಹಾಗೂ ಪುನರ್ನಿರ್ಮಾಣದಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರದ ಹಕ್ಕು ಕಾಯ್ದೆ 2013 ಅಡಿ ಸ್ವಾಧೀನ ಪಡಿಸಿಕೊಳ್ಳಲು ಸಾಮಾಜಿಕ ಪರಿಣಾಮ ನಿರ್ಧರಣ ಅಧ್ಯಯನ ನಡೆಯತಕ್ಕದ್ದಾಗಿದೆ.

6. ಸಾಮಾಜಿಕ ಪರಿಣಾಮ ನಿರ್ಧರಣ ಅಧ್ಯಯನ ನಡೆಸುವ ಸಂಸ್ಥೆಯು "ಭೂಸ್ವಾಧೀನ, ಪುನರ್ವಸತಿ ಹಾಗೂ ಪುನರ್ನಿರ್ಮಾಣದಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರದ ಹಕ್ಕು ಕಾಯ್ದೆ 2013" ಹಾಗೂ ಅದರಡಿ ರಚಿಸಲಾದ (ಕರ್ನಾಟಕ) ನಿಯಮಗಳು 2015 ಕಲಂ 3(6)ರನ್ವಯ ಹಾಗೂ ಒಪ್ಪಂದದಲ್ಲಿನ ಷರತ್ತುಗಳನ್ವಯ ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಮಾಡತಕ್ಕದ್ದು, ಹಾಗೂ ಅವುಗಳನ್ವಯ ಅಂತಿಮ ಸಾಮಾಜಿಕ ಪರಿಣಾಮ ನಿರ್ಧರಣ [ಎಸ್.ಐ.ಎ.] ವರದಿ ನೀಡತಕ್ಕದ್ದು ಹಾಗೂ ಪ್ರಚುರಪಡಿಸತಕ್ಕದ್ದು.

7. ಈ ಯೋಜನೆಯು ಸಾರ್ವಜನಿಕ ಯೋಜನೆಯಾಗಿದ್ದು, ಮಂಗಳೂರು ಮಹಾನಗರ ಪಾಲಿಕೆ ಉದ್ದೇಶಕ್ಕೆ ಜಮೀನನ್ನು ಭೂಸ್ವಾಧೀನಪಡಿಸಲಾಗುತ್ತಿರುವುದರಿಂದ, ಸದ್ರಿ ಯೋಜನೆಯ ಅನುಷ್ಠಾನದಲ್ಲಿ ಗ್ರಾಮ ಸಭೆಯ ಪೂರ್ವ ಒಪ್ಪಿಗೆಯ ಅಗತ್ಯವಿರುವುದಿಲ್ಲ.

8. ಸಾಮಾಜಿಕ ಪರಿಣಾಮ ಅಧ್ಯಯನ ವರದಿಯನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಂದರೆ ಜಿಲ್ಲಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ ಜಿಲ್ಲೆ, ಸಹಾಯಕ ಆಯುಕ್ತರ ಕಛೇರಿ ಮಂಗಳೂರು ವಿಭಾಗ, ಮಂಗಳೂರು ತಾಲೂಕು ಕಛೇರಿ, ಮಹಾನಗರ ಪಾಲಿಕೆ ಕಛೇರಿ, ಮಂಗಳೂರು, ಗ್ರಾಮ ಚಾವಡಿಯಲ್ಲಿ ಮತ್ತು ಜಿಲ್ಲಾ ವೆಬ್ ಸೈಟ್ (www.dk.nic.in) ಇಲ್ಲಿ ಪ್ರಕಟಿಸಲಾಗುವುದು.

9. ಈ ಅಧಿಸೂಚನೆ ಪ್ರಕಟಣೆಯಾದ ನಂತರ ಅಪರ ಜಿಲ್ಲಾಧಿಕಾರಿಗಳು ಹಾಗೂ ಪದನಿಮಿತ್ತ ಆಡಳಿತಾಧಿಕಾರಿಗಳು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರ ಪೂರ್ವ ಲಿಖಿತ ಅನುಮತಿಯಿಲ್ಲದೆ ಸದರಿ ಜಮೀನುಗಳನ್ನು ವಿಲೇ ಮಾಡುವ ಒಪ್ಪಂದದ ಕ್ರಯ, ಕರಾರು, ಭೋಗ್ಯ, ಲೀಜ್, ಅದಲು-ಬದಲು ವಗೈರೆ ಮಾಡುವಂತಿಲ್ಲ. ಸದರಿ ಜಮೀನುಗಳಲ್ಲಿ ಈ ಅಧಿಸೂಚನೆ ಪ್ರಕಟಣೆಯ ನಂತರ ಕಟ್ಟಡಗಳ ನಿರ್ಮಾಣ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ. ಒಂದು ವೇಳೆ ಮಾಡಿದ್ದರೂ ಪರಿಹಾರ ಹಣ ನಿಗಧಿ ಮಾಡುವಾಗ ಅಂತಹ ವ್ಯವಹಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

10. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಧಿಕಾರಿಗಳು ಅಥವಾ ಸಿಬ್ಬಂದಿಗಳು ಅಥವಾ ಕೆಳಗೆ ಸಹಿ ಮಾಡಿರುವವರು ಯಾವುದಾದರೂ ವ್ಯಕ್ತಿಗೆ ಅಧಿಕಾರ ನೀಡಿದ್ದಲ್ಲಿ ಅಂತಹ ವ್ಯಕ್ತಿ ಮತ್ತು ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನದ ಜವಾಬ್ದಾರಿಯನ್ನು ವಹಿಸಿರುವ ಸಂಸ್ಥೆಯ ಅಧಿಕಾರಿಗಳು ಅಥವಾ ಸಿಬ್ಬಂದಿಗಳ ಮೇಲೆ ಅಧ್ಯಯನದ ಪೂರ್ಣ ಅವಧಿಗೆ ಮತ್ತು ಅಂತಿಮ ವರದಿ ಸಲ್ಲಿಸುವವರೆಗೂ ಯಾವುದೇ ದಬ್ಬಾಳಿಕೆ, ಬೆದರಿಕೆ ಅಥವಾ ಪ್ರಭಾವ ಹಾಕಲು ಪ್ರಯತ್ನಿಸುವುದನ್ನು ಕಟ್ಟುನಿಟ್ಟಾಗಿ ನಿಷೇದಿಸಲಾಗಿದೆ.

11. **ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆಯನ್ನು (ಟೆಕ್ಸಾಕ್)** ಸಾಮಾಜಿಕ ಪರಿಣಾಮ ನಿರ್ಧರಣೆ ಅಧ್ಯಯನದ ಸಂಸ್ಥೆ ಎಂದು ಈ ಪ್ರಸ್ತಾವನೆಗೆ ಸೂಚಿಸಲಾಗಿದ್ದು, ಇವರ ಮುಖ್ಯ ಕಛೇರಿಯ ವಿಳಾಸ: 3ನೇ ಮಹಡಿ, ವಿಐಟಿಸಿ ಕಟ್ಟಡ, ಕಸ್ತುರಬಾ ರಸ್ತೆ, ಬೆಂಗಳೂರು-560001 (email: ceo@tecsok.com), (web: www.tecsok.com).

12. ರಾಜ್ಯ ಸಾಮಾಜಿಕ ಪರಿಣಾಮ ನಿರ್ಧರಣ ಘಟಕ ಸಂಪರ್ಕ ಮಾಹಿತಿ.
ಆಯುಕ್ತರ ಕಛೇರಿ, ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಂದಾಯ ಇಲಾಖೆ, ಕರ್ನಾಟಕ ಸರಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001

18/7/18

ಜಿಲ್ಲಾಧಿಕಾರಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು